Sri K. G. Thimme Gowda
Sri M. Linganna
Sri D. Devaraj Urs
Srimathi B. L. Subbamma
Sri B. Hutche Gowda
Sri A. Bheemappa Naik
Sri B. T. Kemparaj
Sri Mulka Govinda Reddy
Sri M. Shankar Linge Gowda

with instructions to report within a week."

The motion was adopted.

The Mysore Court Fees (Amendment) Bill, 1952.

Motion to consider.

Sri A. G. RAMACHANDRA RAO (Minister for Law and Education).—I move.—

"That the Mysore Court Fees (Amendment) Bill, 1952, be taken into consideration"

I preface the consideration of the Bill by only a few remarks.

Our Court Fees Act is an old one, nearly thirty years old, and the schedules given there are according to values and prices prevailing at that time. These thirty years, the expenses of courts and their equipment have enormously increased. Therefore, in order to make up for the loss that the Department is sustaining, a fresh schedule has been introduced to increase the tariff in the various proceedings of the Courts. We can compare our schedules with those in Bombay and Madras. In order to bring up our levy on a par with those of Bombay and Madras, we have given the present schedules. Therefore we may consider this Bill as a fiscal measure also.

The Hon'ble House already knows to what extent the finances in the State have been depleted and I am sure that the House will co-operate in augmenting the financial resources of the State and support this small measure.

With these words I move that this Bill be taken into consideration.

Mr. SPEAKER.—Motion moved:

"That the Mysore Court Fees (Amendment) Bill, 1952, be taken into consideration."

ಶ್ರೀ ಆರ್. ಅನಂತರಾಮ್‌ಅವರು (ಚಾಮರಾಜ ಪೇಟೆ).—ಸ್ವಾಮಿ, ಈ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತಾ ಒಂದು ವಿಚಾರವನ್ನು ಹೇಳಲಿಚ್ಛಿಸುತ್ತೇನೆ. ಹಿಂದೆ ಇದುವರೆಗೆ ಭೂಮಿ ಮೇಲೆ ದಾವಹಾಕ ಬೇಕಾದರೆ ಆ ಭೂಮಿಗೆ ಎಷ್ಟು ಕಂದಾಯ ಹಾಕಿದ್ದಾರೋ ಅದರ ಮೇಲೆ ಕೋರ್ಟು ಫೀಜನ್ನು ತೆಗೆದು ಕೊಳ್ಳುತ್ತಿದ್ದರು. ಮನೆ ಆಥವ ತೋಟವಾದರೆ ಅದರ ಬೆಲೆಯಮೇಲೆ ತೆಗೆದು ಕೊಳ್ಳುತ್ತಿದ್ದರು. ಈಗ ಈ ತಿದ್ದುಪಡಿಯನ್ನು ತಂದಿರುವುದರಲ್ಲಿ ಭೂಮಿ ಅಥವಾ ಮನೆ ಅಥವ ಯಾವ ಸ್ಥಿರ ಆಸ್ತಿಯಾಗಲಿ ಅದರ ಬೆಲೆಯ ಮೇಲೆ ಕೋರ್ಟ್ ಫೀ ಹಾಕಬೇಕೆಂದು ಮಾಡಿದ್ದಾರೆ. ಇದು ಬಹಳ ಒಳ್ಳೆಯದು. ಸಾಮಾನ್ಯವಾಗಿ ಕಂದಾಯದ ಮೇಲೆ ಹಾಕಿದರೆ ಸರ್ಕಾರಕ್ಕೆ ಬಹಳ ಹಣ ಹೊರಟು ಹೋಗುತ್ತದೆ. ಬಹಳ ಬೆಲೆಬಾಳುವ ಭೂಮಿ ಮೇಲೆ ದಾವಾ ಬಂದರೂ ಅದಕ್ಕೆ ಕೇವಲ ಎರಡು ಮೂರು ರೂಪಾಯಿ ಕೋರ್ಟ್‌ಫೀಜು ಆಗುತ್ತದೆ. ಆದಕಾರಣ ದಾವಾ ಹಾಕಬೇಕಾದರೆ ಸ್ವಲ್ಪಹಣ ಮಾತ್ರ ಖರ್ಚಾಗುತ್ತದೆಂದು ಅನೇಕರು ದಾವಾಹಾಕುತ್ತಿದ್ದರು ಈಗ ಬೆಲೆಯ ಮೇಲೆ ಹಾಕಿದರೆ, ಯಾರಿಗೆ ಗೆಲ್ಲುವ ಖಾತ್ರಿಯಿಲ್ಲವೋ ಅಂಥವರು ಕೋರ್ಟಿಗೆ ಬರುವುದಿಲ್ಲ. ಆದುದರಿಂದ ಈ ತಿದ್ದುಪಡಿ ಬಹಳ ಒಳ್ಳೆಯದು. ಇದುವರೆಗೆ ಕೋರ್ಟ್ ಫೀ ಕಡಮೆಯಿದ್ದುದರಿಂದ ಭೂಮಿಗೆ ಸಂಬಂಧಪಟ್ಟ ಸಾವಿರಾರು ಕೇಸುಗಳು ಮುನ್‌ಸೀಫ್ ಮತ್ತು ಸಬ್ ಜಡ್ಜ್‌ರವರ ಕೋರ್ಟುಗಳಲ್ಲಿದ್ದು ಎರಡು ಮೂರು ವರ್ಷಗಳಾದರೂ ತೀರ್ಮಾನಕ್ಕೆ ಬರುತ್ತಿರಲಿಲ್ಲ. ಈ ರೀತಿ ತಿದ್ದುಪಡಿ ಮಾಡುವುದರಿಂದ ಹಳ್ಳಿಯ ಜನರು ಕೋರ್ಟಿಗೆ ಬರುವುದು ಬಹುಮಟ್ಟಿಗೆ ಕಡಮೆಯಾಗುತ್ತದೆ. ಅವರು ವಕೀಲರು ಫೀಜು ಕೋರ್ಟು ಫೀಜು ಕೊಡುವುದೂ ಕಡಮೆಯಾಗುತ್ತದೆ. ಈಗ ಕೋರ್ಟಿಗೆ ಬರುವುದಕ್ಕೆ ಮುಂಚೆ ತಮಗೆ ಅನುಕೂಲವಾಗುತ್ತದೆಯೋ ಇಲ್ಲವೋ ಎಂಬುದನ್ನು ನಾಲ್ಕೈದು ಸಲ ಯೋಚನೆ ಮಾಡಿ ಆ ಮೇಲೆ ದಾವಾ ಹಾಕುತ್ತಾರೆ. ಆದುದರಿಂದ ಈ ತಿದ್ದುಪಡಿ ಮಸೂದೆ ಬಹಳ ಒಳ್ಳೆಯದು; ಇದನ್ನು ಅನುಮೋದಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಸ್ವಾಮಿ, ಈ ಮಸೂದೆಯನ್ನು ನಾನು ವಿರೋಧಿಸಿ ಮಾತನಾಡುವುದಕ್ಕೆ ನಿಂತಿದ್ದೇನೆ. ಮೊದಲನೆಯದಾಗಿ ಇದು ತೆರಿಗೆಯನ್ನು ಹೆಚ್ಚಿಸತಕ್ಕ ಒಂದು ಹೊಸದಾದ ಮಸೂದೆ. ಒಂದು ತೆರಿಗೆಯನ್ನು ಹೆಚ್ಚಿಸಬೇಕಾದರೆ ಅದಕ್ಕೆ ಜವಾಬ್ದಾರರಾಗಿರುವವರು ಎಷ್ಟು ಕಾರಣಗಳನ್ನು ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ.

ಕಳೆದ ಅನೇಕ ವರ್ಷಗಳಿಂದ ಪ್ರತಿವರ್ಷವೂ ತೆರಿಗೆ ಹೆಚ್ಚಿಸಿಕೊಂಡು ಬರುವುದಕ್ಕೆ ಸಂಬಂಧಪಟ್ಟ ಬಿಲ್ಲುಗಳನ್ನು ಪಾಸುಮಾಡುತ್ತಾ ಬಂದಿದ್ದೇವೆ. ಆ ಹಣ ಸರಿಯಾಗಿ ವಿನಿಯೋಗವಾಯಿತೋ ಇಲ್ಲವೋ ಎಂಬುದನ್ನು ನೋಡಿ ಪರಿಶೀಲನೆಮಾಡಿ ಒಪ್ಪಿಗೆ ಕೊಡುವುದು ನ್ಯಾಯ. ನಿಜವಾಗಿ ಪ್ರಜೆಗಳಿಂದ ವಸೂಲಾಗುವ ಹಣ ಜನರ ಕ್ಷೇಮಲಾಭಗಳಿಗಾಗಿ ಖರ್ಚಾಗುವುದಾದರೆ, ಅಂತಹ ಮಸೂದೆಗೆ ಒಪ್ಪಿಗೆ ಕೊಡಬಹುದು. ಆದರೆ ಆದಳಿತದ ಅನೇಕ ಬಾಬುಗಳಲ್ಲಿ ಖರ್ಚು ಖೋತಾವಾ

(ಶ್ರೀ ಬಿ. ಹುಚ್ಚೇಗೌಡರು).

ಡುವುದಕ್ಕೆ ಮತ್ತು ದುಂದು ವೆಚ್ಚಗಳನ್ನು ನಿಲ್ಲಿಸುವುದಕ್ಕೆ ಬೇಕಾದಷ್ಟು ಅವಕಾಶವಿರುವಾಗ ಇಂತಹ ಕೋರ್ಟ್ ಫೀಜನ್ನು ಇಷ್ಟೊದ ಬಾರಿಯಾಗಿ ಹೆಚ್ಚುಮಾಡುವುದು ಖಂಡಿತ ಸೂಕ್ತವಲ್ಲವೆಂದು ಇದನ್ನು ವಿರೋಧಿಸಬೇಕಾಗಿದೆ.

ಸಾಮಾನ್ಯವಾಗಿ ಇಂತಹ ವಿಚಾರಗಳಲ್ಲಿ ಇತರ ದೇಶಗಳನ್ನು ಮಾದರಿಯಾಗಿ ತೋರಿಸುವುದು ಬಹು ಮಟ್ಟಿಗೆ ಅಭ್ಯಾಸಕ್ಕೆ ಬಂದಿದೆ. ತೆರಿಗೆ ಹೆಚ್ಚಿಸಬೇಕಾದಾಗಲೆಲ್ಲ ಅಲ್ಲಿನ ಉದಾಹರಣೆಯನ್ನು ತೋರಿಸುತ್ತಾರೆ. ಆ ದೇಶಗಳಿಗೂ ನಮಗೂ ಇರುವ ವ್ಯತ್ಯಾಸವನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಹೀಗಿರುವಾಗ ಏಕೆ ಇಲ್ಲಿ ಹೆಚ್ಚಿಸಬೇಕು? ನಮ್ಮ ದೇಶದಲ್ಲಿ ಮುಖ್ಯವಾಗಿ ನ್ಯಾಯಾಲಯಗಳಲ್ಲಿ ಜನರಿಗೆ ನ್ಯಾಯ ದೊರೆಯಬೇಕಾದರೆ ಅಷ್ಟು ಸುಲಭ ಖರ್ಚಿನಲ್ಲಿ ದೊರೆಯಬೇಕಾದುದು ನ್ಯಾಯ. ಈಗ ಹತ್ತು ರೂಪಾಯಿ ಬಾಳುವ ಆಸ್ತಿ ಮೇಲೆ ದಾವಾ ಹಾಕಬೇಕಾದರೆ ಒಂಬತ್ತು ರೂಪಾಯಿ ಖರ್ಚಾಗುತ್ತದೆ. ನ್ಯಾಯವನ್ನು ಹಣ ಕೊಟ್ಟು ಕೊಂಡ ಹಾಗಾಗುತ್ತದೆ. ಇದೇ ರೀತಿ ಹೆಚ್ಚಿಸಿಕೊಂಡು ಹೋದರೆ ಎಲ್ಲಿಗೆ ಪರ್ಯವಸಾನ? ಇವಕ್ಕೆ ಬದಲಾಗಿ, ಇಂತಹ ವಿಚಾರಗಳಲ್ಲಿ ಸಾಮಾನ್ಯವಾಗಿ ಗ್ರಾಮಗಳಲ್ಲೇ ನ್ಯಾಯ ಹೈಸಲು ಮಾಡುವುದಕ್ಕೆ ಸರಿಯಾದ ಒಂದು ವ್ಯವಸ್ಥೆ ಮಾಡಿ ಹಳ್ಳಿಯವರು ಕೋರ್ಟು ಕಚೇರಿಗಳಿಗೆ ಹಣ ಖರ್ಚುಮಾಡುವುದನ್ನು ಕಡಮೆ ಮಾಡುವುದಕ್ಕೆ ಒಂದು ಮಸೂದೆಯನ್ನು ತಂದಿದ್ದಾರೆ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದೆವು. ಹೀಗೆ ಒಂದೊಂದಾಗಿ ತೆರಿಗೆಗಳನ್ನು ಹೆಚ್ಚಿಸಿಕೊಂಡು ಹೋಗುವುದು ಸಾಮಾನ್ಯವಾಗಿ ಅನುಕೂಲಸ್ಥರ ಮೇಲೆ ಆಥವಾ ಸಾಹುಕಾರರ ಮೇಲೆ ಬೀಳುವುದಿಲ್ಲ. ಸಾಮಾನ್ಯವಾಗಿ ಕೊಡಲಾರದ ಬಡವನೇ ದಾವಾ ಮಾಡಿಸಿಕೊಳ್ಳುವವನು. ಕೊಡುವುದಕ್ಕೆ ಶಕ್ತಿಯಿದ್ದರೆ ಅವರ ಮೇಲೆ ಕೋರ್ಟಿಗೆ ದಾವಾ ಹಾಕುವ ಅಗತ್ಯವಿರುತ್ತಿದ್ದಿಲ್ಲ. ಹೀಗೆ ಬಡವ ಕೊಡುವ ಬಡ್ಡಿ, ಸುಸ್ತಿ ಬಡ್ಡಿ ಇವುಗಳ ಜೊತೆಗೆ ನೂರಕ್ಕೆ ಒಂದೂ ಕಾಲು ರೂಪಾಯಿ ಹೆಚ್ಚು ಮಾಡಿರುವುದು ಸರಿಯಲ್ಲ. ಆಥವಾ ಒಂದೆರಡು ವರ್ಷ ಮೂರು ವರ್ಷವಿದ್ದರೆಗಾದರೂ ವಿನಾಯಿತಿ ತೋರಿಸಿ, ಇದಕ್ಕೆ ಮೇಲ್ಪಟ್ಟದ್ದಕ್ಕೆ ಹೆಚ್ಚು ಮಾಡಿದ್ದರೆ ಅದನ್ನು ನಾವು ಸ್ವಲ್ಪ ಯೋಚನೆ ಮಾಡಬಹುದಾಗಿತ್ತು. ಬಡವರಿಗೆ ಈಗಲೇ ಕಂದಾಯದ ಹೊರೆ ಹೆಚ್ಚಿರುವಾಗ ಈ ರೀತಿ ಹೆಚ್ಚಿಸುವುದಕ್ಕೆ ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಮಸೂದೆಯನ್ನು ವಿರೋಧಿಸುತ್ತೇನೆ.

ಇನ್ನೊಂದು ಕಾರಣವೇನೆಂದರೆ ಈ ಮಸೂದೆಯಲ್ಲ ಕೇವಲ ಟ್ಯಾಕ್ಸ್ ಹೆಚ್ಚು ಮಾಡುವುದೊಂದೇ ಇಲ್ಲ. ಇದರಲ್ಲಿ ವಿವಾಹ ಮತ್ತು ವಿವಾಹವಿಚ್ಛೇದನಕ್ಕೆ ಸಂಬಂಧಪಟ್ಟದ್ದನ್ನು ಸೇರಿಸಿದ್ದಾರೆ. ಇದೇ ಬೇರೆ ಇದ್ದಿದ್ದರೆ ಚೆನ್ನಾಗಿತ್ತು. ಇದಕ್ಕೆ ಸಂಬಂಧ ಕಲ್ಪಿಸಿರುವುದು ಚೆನ್ನಾಗಿಲ್ಲ. ಇದು ಬೇರೆ ಹೊಸದಾಗಿ ಹಾಕಬೇಕಾದ ಬಾಬು. ಇದನ್ನೂ ಕೋರ್ಟ್‌ಫೀ ಹೆಚ್ಚಿಸಬೇಕಾದ ಬಾಬನ್ನೂ ಇವೆರಡನ್ನೂ ಒಟ್ಟಿಗೆ ಸೇರಿಸಿರುವುದು ಸರಿಯಲ್ಲ. ಒಟ್ಟಿನಲ್ಲಿ ಈ ಮಸೂದೆಯನ್ನು ವಿರೋಧಿಸುತ್ತೇನೆ.

*ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).- ಸ್ವಾಮಿ, ನಾನು ಈ ಮಸೂದೆಗೆ ಬೆಂಬಲ ನೀಡುತ್ತೇನೆ. ಆದರೆ ವಿರೋಧ ಪಕ್ಷದವರು ಇದನ್ನು ವಿರೋಧಿಸಿದ್ದಾರೆ ಆದರೆ ವಿರೋಧಿಸುವುದಕ್ಕೂ ಒಂದು ಕಾರಣಬೇಕು. ಮಾನ್ಯ ಮಂತ್ರಿಗಳು ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದೂ ಆಯಿತು; ಅದನ್ನು ಮತ್ತೊಬ್ಬ ಮಾನ್ಯ ಸದಸ್ಯರು ಅನುಮೋದಿಸಿದ್ದೂ ಆಯಿತು. ಇಷ್ಟಾದ ಕೂಡಲೇ ಇದನ್ನು ವಿರೋಧಪಕ್ಷದವರು ವಿರೋಧಿಸಿದ್ದಾರೆ. ಅವರು ಇದನ್ನು ಹಾಗೆ ವಿರೋಧಿಸಿರುವುದಕ್ಕೆ ಕಾರಣ ಇದೊಂದು ತೆರಿಗೆ ಎಂದು. ಆದರೆ ಶ್ರೀಮಾನ್ ಹುಚ್ಚೇಗೌಡರಿಗೆ ತೆರಿಗೆಗೂ ಮತ್ತು 'ಫಿ'ಗೂ ಇರುವ ವ್ಯತ್ಯಾಸವೇ ಗೊತ್ತಿಲ್ಲವೆಂದು ಕಾಣುತ್ತದೆ. ಒಂದೊಂದು ಪ್ರದೇಶದಲ್ಲಿ ಟ್ಯಾಕ್ಸ್ ಒಂದೊಂದು ರೀತಿಯಾಗಿರುತ್ತದೆ ಆದರೆ 'ಫಿ" ಎಂಬುದು ಆ ರೀತಿಯಿರುವುದಿಲ್ಲ. ಯಾರು ತಮ್ಮ ತಮ್ಮ ವ್ಯವಹಾರಗಳ ಬಗ್ಗೆ ನ್ಯಾಯನಿರ್ಣಯಕ್ಕಾಗಿ ಕೋರ್ಟಿಗೆ ಹೋಗುತ್ತಾರೋ ಅಂಥವರಿಗೆ ಹಾಕತಕ್ಕ ಸುಂಕ ಇದು. ಇದನ್ನು ಒಂದು ತೆರಿಗೆಯೆಂದು ಹೇಳುವುದಕ್ಕಾಗುವುದಿಲ್ಲ. ಯಾರಾದರೂ ಈಗ ಒಂದು ಸಣ್ಣ ಕೇಸನ್ನೇ ಕೋರ್ಟಿಗೆ ತೆಗೆದುಕೊಂಡು ಹೊದರೂ, ಅದಕ್ಕೆ ರಾಯರಿಗೆ 300-400 ರೂಪಾಯಿ ಕೊಡಬೇಕಾಗುತ್ತದೆ. ಆದರೆ ಅದೆಲ್ಲವನ್ನು ಕೋರ್ಟ್ ಖರ್ಚೆಂದು ಹೇಳುವುದಕ್ಕಾಗುವುದಿಲ್ಲ.

ಈ ಮಸೂದೆಯನ್ನು ವಿರೋಧಿಸಿದ ಮಾನ್ಯ ಸದಸ್ಯರ ಪೈಕಿ ಕೆಲವರು ಇದರಲ್ಲಿ ದಾಂಪತ್ಯ ವಿಚ್ಛೇದನಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಆಡಕ ಮಾಡಲಾಗಿದೆ, ಅದು ಸರಿಯಾದ್ದಲ್ಲ, ಇದನ್ನೇ ಒಂದು ಅಲಾಯಿದ ಪುಸ್ತಕವನ್ನಾಗಿ ಮಾಡಿ, ಸಭೆಯ ಮುಂದೆ ತರಬೇಕಾಗಿತ್ತೆಂದು ಹೇಳಿದರು. ಹಾಗೆ ಇದನ್ನೇ ಒಂದು ಅಲಾಯಿದ ಪುಸ್ತಕದಲ್ಲಿ ತರಬೇಕೆಂದು ಹೇಳುವುದು, ಅದೊಂದು ದುಬಾರಿಯ ದಂಡಕ್ಕೆ ಕಾರಣ ಆಷ್ಟೆ. ಹಾಗೆ ಮಾಡಬೇಕಾದ್ದೇನೂ ಬೇಕಾಗಿಲ್ಲ. ಈ ಫೀಜಿನ ವಿಚಾರವಾಗಿ ಮೈಸೂರಿನಲ್ಲಿ ಅಷ್ಟೇನೂ ಹೆಚ್ಚು ಮಾಡಿಲ್ಲ. ಇತರ ಪ್ರಾಂತಗಳವರೆಲ್ಲರೂ ಹೇಗೆ ಹೆಚ್ಚಿಸಿದ್ದಾರೋ, ಇವರೂ ಹಾಗೆ ಹೆಚ್ಚಿಸಿದ್ದಾರೆ. ಕಾರಣ ಇಂಥ ವಿಚಾರಗಳಲ್ಲಿ ಒಂದೇ ರೀತಿಯಾಗಿ ಎಲ್ಲ ಕಡೆಗಳಲ್ಲೂ ಫೀಜು ಇರಬೇಕೆಂಬುದೇ ಉದ್ದೇಶ. ಇದರಿಂದ ಸಂಸ್ಥಾನಕ್ಕೆ ಬರತಕ್ಕ ಉತ್ಪತ್ತಿ ಸುಮಾರು ಎರಡು ಲಕ್ಷ ರೂಪಾಯಿಗಳೆಂದು ಹೇಳಿದ್ದಾರೆ. ಈಗ ದೇಶಕ್ಕೆ ಮುಖ್ಯವಾಗಿ ದುಡ್ಡಿನ ಸರಬರಾಯಿ ಬೇಕಾಗಿದೆ. ದೇಶದ ನಾನಾ ಭಾಗದ ಜನರು ತಮಗೆ ಪಾಠಶಾಲೆಗಳು ಬೇಕು, ಅದು ಬೇಕು, ಇದು ಬೇಕು ಎಂದು ಕೇಳುತ್ತಿದ್ದಾರೆ. ಇಂಥ ಉಪಯುಕ್ತ ಬಾಬುಗಳಿಗೆ ಈ ಹಣವನ್ನು ವಿನಿಯೋಗಿಸಲಾಗುತ್ತದೆ. ಈ ಸುಂಕ ಹಾಕಿದ್ದರಿಂದ ಎಲ್ಲಾ ಜನರಿಗೂ ಏನೂ ಅಂಥ ತೊಂದರೆಯುಂಟಾಗಿಲ್ಲ. ಯಾವನು ತರಲೆ ಮಾಡಿಕೊಂಡು ಕೋರ್ಟಿಗೆ ಹೋಗುತ್ತಾನೋ ಅಂಥವನಿಗೆ ಸ್ವಲ್ಪ ತೊಂದರೆ ಇದರಿಂದ ಆಗಬಹುದು. ನಾನು ಈ ಬಿಲ್ಲನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

Mr. SPEAKER.—The question is :

"That the Mysore Court Fees (Amendment) Bill, 1952 be taken into consideration".

The motion was adopted.

---

* Speeches indicated by asterisk has not been revised by the member concerned.

Motion to refer.

Sri H. S. RUDRAPPA (Honnali).—Sir, I move :

"That the Mysore Court Fees (Amendment) Bill, 1952, be referred to a Select Committee consisting of.—

The Minister for Law and Education (*Chairman*)

Sriyuths.—
K. Pattabhiraman
K. Puttaswami
B. T. Kempa Raj
V. Masiyappa
and the Mover,
with instructions to report within a week."

Mr. SPEAKER.—Motion moved.—

"That the Mysore Court Fees (Amendment) Bill, 1952, be referred to a Select Committee consisting of—

Sriyuths :—
K Pattabhiraman
K. Puttaswami
B. T. Kempa Raj
V. Masiyappa,
with the Minister for Law and Education as Chairman and with instructions to report within a week."

Sri Mulka GOVINDA REDDY (Chitaldrug).—I propose the name of Sri B. P. Nagaraja Murthy to be added on to the list.

Sri H. S. RUDRAPPA.—I have no objection.

Mr. SPEAKER.—The question is :

"That the Mysore Court Fees (Amendment) Bill, 1952, be referred to a Select Committee consisting of—

Sriyuths.—
K. Pattabhiraman
K. Puttaswami
B. T. Kempa Raj
V. Masiyappa, and
B. P. Nagaraja Murthy.
with the Minister for Law and Education as Chairman and with instructions to report within a week."

The motion was adopted.

Mysore University (Amendment) Bill, 1952.

Motion to consider.

Sri A. G. RAMACHANDRA RAO (Minister for Law and Education).—Sir, I move :

"That the Mysore University (Amendment) Bill, 1952 be taken into consideration."

This Bill is brought in order to overcome some anomalies, some difficulties that have come in the way. The draft Bill has already been circulated and as may be seen, there are three amendments which are sought to be taken up for consideration in this House.

One is regarding the Senate. The Senate consists of 75 members and according to an earlier portion of the Act, all the Principals of the Affiliated and Constituent Colleges are *Ex-officio* members of the Senate and the number of Affiliated Colleges within two years has increased enormously and if all the heads of the Affiliated Colleges are included in the Senate, the number of members exceeds 75. That would lead to an anomalous position. Further, an unnecessary increase in the representation of these Principals is not of much use either. Therefore, the Bill has sought to restrict the number to 75 by means of this amendment.

The other two amendments relate to the representation of this Hon'ble House and the Legislative Council on the Senate. Till these two Houses were constituted, there was only one Legislative Assembly which was returning 12 members to the Senate. Now in order to apportion these 12 members between these two Houses, the amending Bill proposes to divide it in the following manner : 9 members from this Hon'ble House and 3 members from the Legislative Council. Therefore, the provisions of this Bill are simple and there are no complicated matters and I submit that the Bill be taken into consideration without much comment.